ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧುವಾರ ದಿನಾಂಕ ೨೧ನೇ ಮಾರ್ಚಿ ೧೯೯೦ ಫಾಲ್ಗುಣ ೩೦ ಶಕ ೧೯೧೧

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ)ಅವರು ಪೀಠವನ್ನು ಅಲಂಕರಿಸಿದ್ದರು.]

ಪ್ರಶ್ನೋತ್ತರ

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ತುಮಕೂರು ಜಿಲ್ಲೆಯಲ್ಲಿ ಕುಡಿಯುವ ನೀರಿನ ಕೊರತೆ

೧೮೩. ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆಯಲ್ಲಿ ಕುಡಿಯುವ ನೀರಿನ ಅಭಾವದ ಬಗ್ಗೆ ಸರ್ಕಾರಕ್ಕೆ ಅರಿವಿದೆಯೇ ?

ಆ) ತುಮಕೂರು ಜಿಲ್ಲೆಯಲ್ಲಿ ಕುಡಿಯುವ ನೀರು ಸರಬರಾಜು ಮಾಡಲು ಎಷ್ಟು ಯೋಜನೆಗಳನ್ನು ಕೈಗೊಳ್ಳಲಾಗಿದೆ ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಶುಸಂಗೋಪನ ಮಂತ್ರಿಗಳು).—

ಅ) ಹೌದು

ಆ) ೧೯೮೯–೯೦ರ ಕಾರ್ಯಕ್ರಮದಲ್ಲಿ, ಈ ಜಿಲ್ಲೆಯಲ್ಲಿ ರಾಜ್ಯ ಯೋಜನೆ ಹಾಗೂ ಕೇಂದ್ರ ಯೋಜನೆಗಳ ಅಡಿಯಲ್ಲಿ ೧೨೯ ನಳ ನೀರು ಸರಬರಾಜು ಯೋಜನೆಗಳನ್ನು, ೧೨೯ ಕಿರು ನೀರು ಸರಬರಾಜು ಯೋಜನೆಗಳನ್ನು ಹಾಗೂ ೧೯೭ ಕೊಳವೆ ಬಾವಿ ಯೋಜನೆಗಳನ್ನು ಕೈಗೊಳ್ಳಲಾಗಿದೆ.

Sri K. LAKKAPPA.—Sir, the question is so wide and the answer is so brief. Hon'ble Minester has conceded that there is lot of scarcity of drinking water in Tumkur District as well in the State Also May I know whether th State and the Centre have organised the supply of drinking water to the State? How many sanctioned works which are under what is called NRW schemes from the Centre and from the State are taken up by the State Government.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ೧೯೮೯–೯೦ರ ಕಾರ್ಯಕ್ರಮದಲ್ಲಿ ಈ ಜಿಲ್ಲೆಯಲ್ಲಿ ರಾಜ್ಯ ಯೋಜನೆ ಹಾಗೂ ಕೇಂದ್ರ ಯೋಜನೆಗಳ ಅಡಿಯಲ್ಲಿ ೧೨೯ ನಳ ನೀರು ಸರಬರಾಜು ಯೋಜನೆಗಳನ್ನು, ೧೨೯ ಕಿರು ನೀರು ಸರಬರಾಜು ಯೋಜನೆಗಳನ್ನು ಹಾಗೂ ೧೯೭ ಕೊಳವೆ ಬಾವಿ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಇದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಈ ನೀರಿನ ಅಭಾವ ತುಮಕೂರು ಜಿಲ್ಲೆಯಲ್ಲಿ ಒಂದೇ ಕಡೆ ಇಲ್ಲ, ನಮ್ಮ ಕರ್ನಾಟಕ ರಾಜ್ಯದ ಎಲ್ಲಾ ಕಡೆಯಲ್ಲೂ ಇಂಥ ಪರಿಸ್ಥಿತಿ ಜಾಸ್ತಿಯಾಗಿದೆ. ಕೊಳವೆ ಬಾವಿಗಳನ್ನು

ತೋಡುವುದು ಬಿಡುವುದು ಬೇರೆ ವಿಚಾರ ಆದರೆ ಈ ವಿಚಾರದಲ್ಲಿ ಎಲ್ಲಿ ನೀರಿನ ಅಭಾವ ವಿಶೇಷವಾಗಿ ಇದೆ ಆಲ್ಲಿ ಬಾವಿಗಳನ್ನು ತೋಡಲಿಕ್ಕೆ ನಾವು ಸಿದ್ಧರಾಗಿದ್ದೇವೆ ಮತ್ತೆ ಮಾನ್ಯ ಸದಸ್ಯರು ಯಾವ ಯಾವ ಗ್ರಾಮಗಳಲ್ಲಿ ಮತ್ತು ಯಾವ ತಾಲ್ಲೂಕಿನಲ್ಲಿ ಈ ನೀರಿನ ಅಭಾವದ ಪರಿಸ್ಥಿತಿ ಇದೆ, ಆ ಸ್ಥಳಗಳನ್ನು ತಿಳಿಸಿದರೆ ನಾವು ಹೆಚ್ಚು ತೀವ್ರತೆಯಿಂದ ಆ ಸ್ಥಳಗಳ ಬಗ್ಗೆ ನಾವು ಕಾರ್ಯಕ್ರಮವನ್ನು ಕೈಗೊಳ್ಳಲು ಪ್ರಾರಂಭ ಮಾಡುತ್ತೇವೆ.

SRI K. LAKKAPPA.—I would like to know from the Hon'ble Minister which are the agencies that are operating in implementing these schemes in the district level as well as in the rural level in the towns and whether those agencies are working properly and on those agencies which have not worked properly, whether any action has been taken? so far as failure of the borewells, fixing of agency and inordinate delay in digging borewells and also misappropriation of funds through Zilla Parished organisation, I would like to know the action taken by the Govt. Whether they have paid more money in digging these wells instead of paying reasonable rate resulting in great loss to the tune of several lakhs of rupees ? In fact, it so happened in Tumkur and it also happened elsewhere in the State. Therefore, whether the Government has taken any action in this direction against all those people who are working in collusion with this organisation and the administration ? Whether action has been taken to black-list those people who indulged in such mal-practices?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮುಂಚಿತವಾಗಿ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಇಂತಹ ಕೊಳವೆ ಬಾವಿಗಳನ್ನು ತೋಡಲು ಗುತ್ತಿಗೆ ಕೊಡತಕ್ಕ ವ್ಯವಸ್ಥೆ ಇತ್ತು ಇಂತಹ ಕೆಲಸಗಳನ್ನು ಖಾಸಗಿಯವರೂ ಮಾಡುತ್ತಿದ್ದರು ಹಾಗೂ ಸರ್ಕಾರದಿಂದ ಸಹ ಮಾಡಲಾಗಿದೆ ಮತ್ತು ಆಗ್ರೋ ಇಂಡಸ್ಟ್ರೀಸ್‌ನಿಂದ ಸಹ ಬಾವಿಗಳನ್ನು ತೆಗಿಸಲಿಕ್ಕೆ ಪ್ರಯತ್ನ ಮಾಡಿದ್ದೇವೆ ಸಮಗ್ರವಾಗಿ ಇದರ ಕಡೆ ಗಮನ ಕೊಟ್ಟು ಮುಂಬರುವ ವರ್ಷಗಳಲ್ಲಿ ಒಂದು ರೀತಿಯ ಏಜೆನ್ಸಿ ಮುಖಾಂತರವಾಗಿ ಈ ಒಂದು ಯೋಜನೆಯನ್ನು ಕಾರ್ಯಗತ ಮಾಡಬೇಕೂ ಎಂದು ಸರ್ಕಾರ ಯೋಚನೆ ಮಾಡುತ್ತಿದೆ. ಶೀಘ್ರದಲ್ಲಿಯೇ ನಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಒಂದು ಮಾತು ಹೇಳಿದ್ದಾರೆ ಏನೆಂದರೆ, ಯಾರು ತಪ್ಪು ಮಾಡಿದ್ದಾರೆ, ಮತ್ತು ಯಾರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಕೆಲಸ ಮಾಡಿದ್ದಾರೆ ಎಂದು ಏನು ಹೇಳಿದ್ದಾರೆ ಇದರ ಬಗ್ಗೆ ತೀವ್ರ ಯೋಚನೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ರಾಜ್ಯದ ನಗರ ಪ್ರದೇಶಗಳಲ್ಲಿ ಸೊಳ್ಳೆ ಕಾಟ

೧೩೭ ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ). ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹಾಗೂ ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಸೊಳ್ಳೆ ಕಾಟ ಹೆಚ್ಚಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರವು ಸೊಳ್ಳೆ ಕಾಟವನ್ನು ನಿವಾರಿಸಲು ಕೈಗೊಂಡ ಕ್ರಮಗಳೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—

ಅ) ಹೌದು.

ಆ) ಸೊಳ್ಳೆ ಕಾಟ ನಿವಾರಿಸಲು ಈ ಕೆಳಕಂಡ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

೧) ಸೊಳ್ಳೆ ಉತ್ಪತ್ತಿಯಾಗುವ ನಿಂತ ನೀರು ಚರಂಡಿಯ ನೀರನ್ನು ಸರಾಗವಾಗಿ ಹರಿಯಲಂ ಸಣ್ಣ ಕಾಮಗಾರಿ ಕೆಲಸವನ್ನು ಕೈಗೊಳ್ಳುವುದು